**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ, ಹೊಸದುರ್ಗ.**

ಅಸಲು ದಾವಾ ಸಂಖ್ಯೆಃ **339/2018** ದಿನಾಂಕಃ **04-02-2025**

ಪಿ.ಡಬ್ಲ್ಯೂಃ**1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಃ 2 ನೇ ಪ್ರತಿವಾದಿಯ ಪರ ಶ್ರೀ ಎಂ.ಎಸ್.ಎಸ್ ವಕೀಲರಿಂದ**

1. ನನ್ನ ತಂದೆಯ ಹೆಸರು ಜಂತಿಕೊಳಲು ಗೋವಿಂದಪ್ಪ. ನನ್ನ ತಂದೆಯ ತಂದೆ ಅಂದರೆ ನನ್ನ ಅಜ್ಜನ ಹೆಸರು ತಿಮ್ಮದಾಸಪ್ಪ. ನನ್ನ ತಂದೆಗೆ 4 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ಮೊದಲನೆಯವರು ಹನುಮಜ್ಜಿ, ಎರಡನೆಯವರು ರಂಗಮ್ಮ, ಮೂರನೆಯವರು ತಿಮ್ಮಪ್ಪ, ನಾಲ್ಕನೆಯವರು ಸೀತಮ್ಮ, ಐದನೇಯವರು ಚಂದ್ರಪ್ಪ, ಆರನೆಯವರು ಅಂಜನಪ್ಪ, ಏಳನೆಯವರು ನಾರಾಯಣಪ್ಪ. ಇವರುಗಳ ಪೈಕಿ ಎರಡನೆಯವರು ರಂಗಮ್ಮ ಮರಣ ಹೊಂದಿರುತ್ತಾರೆ. ಹೆಣ್ಣು ಮಕ್ಕಳ ಪೈಕಿ ಅಂಜನಪ್ಪ ಮರಣ ಹೊಂದಿರುತ್ತಾರೆ. ರಂಗಮ್ಮನವರಿಗೆ ವಾರಸುದಾರರು ಇರುತ್ತಾರೆ. ರಂಗಮ್ಮನವರಿಗೆ ಒಟ್ಟು 6 ಜನ ಮಕ್ಕಳು. ಎಲ್ಲರೂ ಬೇರೆ ಬೇರೆ ಊರುಗಳಲ್ಲಿ ವಾಸ ಮಾಡುತ್ತಿರುತ್ತಾರೆ. ಅವರ ಊರುಗಳ ಬಗ್ಗೆ ತಿಳಿದಿದೆ, ವಿಳಾಸ ಗೊತ್ತಿಲ್ಲ.

2. ಮೃತ ಅಂಜನಪ್ಪರವರಿಗೆ 1 ಗಂಡು ಮತ್ತು 1 ಹೆಣ್ಣು ಮಕ್ಕಳಿದ್ದು ಅವರ ಪೈಕಿ ಹೆಣ್ಣು ಮಗಳು ಮರಣ ಹೊಂದಿರುತ್ತಾರೆ. ಅಂಜನಪ್ಪರವರ ಹೆಂಡತಿ ಜೀವಂತ ಇರುತ್ತಾರೆ. ನನ್ನ ತಾಯಿ 1981 ರಲ್ಲಿ ಮರಣ ಹೊಂದಿರುತ್ತಾರೆ, ಆಗ ನನ್ನ ತಂದೆ ಜೀವಂತ ಇದ್ದರು. ನನ್ನ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತಿಘಟ್ಟ, ಗೊರವಿಗೊಂಡನಹಳ್ಳಿ ಮತ್ತು ಕೆಲ್ಲೋಡು ಗ್ರಾಮಗಳಲ್ಲಿ ಆಸ್ತಿಗಳನ್ನು ಮಾಡಿದ್ದರು. 3 ಊರಿನ ಜಮೀನುಗಳಿಂದ ಸೇರಿ ಸುಮಾರು 20 ಎಕರೆ

ಜಮೀನು ಆಗಬಹುದು. ಗೊರವಿಗೊಂಡನಹಳ್ಳಿ ಗ್ರಾಮದಲ್ಲಿ 2 ನಿವೇಶನಗಳು ಇರುತ್ತವೆ. ಸದರಿ ಮನೆ ಮತ್ತು ಜಮೀನು ಆಸ್ತಿಗಳಲ್ಲಿ ನಾವು ಸಣ್ಣವರಿದ್ದಾಗಿನಿಂದ ಒಟ್ಟಿಗೆ ಅನುಭವಿಸಿಕೊಂಡು ಬರುತ್ತಿದ್ದೆವು.

3. ನನ್ನ ತಾಯಿ ಮತ್ತು 2 ನೇ ಪ್ರತಿವಾದಿ ಚಂದ್ರಪ್ಪನವರ ಹೆಂಡತಿ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ಕುಟುಂಬದಲ್ಲಿ ವ್ಯಾಜ್ಯಗಳು ಉಂಟಾದವು. ನಮ್ಮಗಳ ವಿವಾಹ ಆಗುವ ಸಮಯದಲ್ಲಿ ಗೊರವಿಗೊಂಡನಹಳ್ಳಿ ಗ್ರಾಮದ 1 ಹೆಂಚಿನ ಮನೆಯಲ್ಲಿ ಒಟ್ಟಿಗೆ ವಾಸ ಇದ್ದೆವು. ಸದರಿ ಹಳೇ ಮನೆಯ ನಂಬರು ನನಗೆ ಗೊತ್ತಿಲ್ಲ. ಸದರಿ ಮನೆಯ ಚಕ್ಕುಬಂದಿ ಪೂರ್ವಕ್ಕೆಃ-ಹೊಳೆ ರಾಮಣ್ಣರವರ ಮನೆ, ಪಶ್ಚಿಮಕ್ಕೆಃ-ಕದುರಜ್ಜರವರ ಮನೆ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ. 2 ನೇ ಪ್ರತಿವಾದಿಯ ಹೆಂಡತಿಯ ಹೆಸರು ಪದ್ಮಾವತಮ್ಮ. ಆಕೆಯನ್ನು ಪದ್ದಮ್ಮ ಎಂದು ಸಹ ಕರೆಯುತ್ತಾರೆ. ಸದರಿ ಪದ್ದಮ್ಮ ಮತ್ತು ನನ್ನ ತಾಯಿಯ ನಡುವೆ ಕುಟುಂಬದಲ್ಲಿ 1976 ರಲ್ಲಿ ಜಗಳ ಉಂಟಾದಾಗ ಅವರನ್ನು ಹೇಗಾದರೂ ಮಾಡಿ ಮನೆಯಿಂದ ಹೊರಹಾಕಬೇಕೆಂದು ನನ್ನ ತಂದೆ ದಾವೆಯನ್ನು ಹೂಡಿದ್ದರು. ಸದರಿ ದಾವೆಯಲ್ಲಿ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಆಗಿತ್ತು. ಸದರಿ ಆದೇಶವನ್ನು ತೋರಿಸಿ ನನ್ನ ತಂದೆ ಚಂದ್ರಪ್ಪನ ವಿರುದ್ಧ ಹೊಸದುರ್ಗ ಠಾಣೆಯಲ್ಲಿ ಆಗ ದೂರು ನೀಡಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಆಗ ಚಂದ್ರಪ್ಪ ಹೆದರಿ ತನ್ನ ಹೆಸರಿನಲ್ಲಿ ಹಕ್ಕು ಖುಲಾಸೆ ಪತ್ರ ಸೃಷ್ಠಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆ ದಾಖಲಿಸಿದ ಸಮಯದಲ್ಲಿ 2 ನೇ ಪ್ರತಿವಾದಿಗೆ ಮನೆ ಅಥವಾ ಜಮೀನು ಆಸ್ತಿ ನೀಡಿರಲಿಲ್ಲ ಎಂದರೆ ಸರಿ.

4. ಕೆಲ್ಲೋಡು ಸರ್ವೆ ನಂಃ74 ರಲ್ಲಿ 2 ಎಕರೆ ಜಮೀನು, ಗೊರವಿಗೊಂಡನಹಳ್ಳಿಯ ಸರ್ವೆ ನಂಃ44/1 ರಲ್ಲಿ 1 ಎಕರೆ 14 ಗುಂಟೆ ಜಮೀನು ಮತ್ತು ಗೊರವಿಗೊಂಡನಹಳ್ಳಿಯ 1 ನಿವೇಶನದಲ್ಲಿ ಅರ್ಧ

ನಿವೇಶನವನ್ನು ಹಕ್ಕು ಖುಲಾಸೆ ಮೂಲಕ 2ನೇ ಪ್ರತಿವಾದಿಗೆ ನೀಡಿದ್ದರು. ಗೊರವಿಗೊಂಡನಹಳ್ಳಿಯ ಸರ್ವೆ ನಂಃ44/1 ರಲ್ಲಿ 1 ಎಕರೆ 14 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆಃ-ದಾಸಣ್ಣ, ಪಶ್ಚಿಮಕ್ಕೆಃ-ನಗಾರಿ ಚಿಕ್ಕಣ್ಣನ ಮಕ್ಕಳು, ಉತ್ತರಕ್ಕೆಃ-ವಸ್ತ್ರದರವರ ಜಮೀನು, ದಕ್ಷಿಣಕ್ಕೆಃ-ಸಾಣೇನಹಳ್ಳಿ ಹನುಮಂತರವರ ಮಗ ತಿಮ್ಮಣ್ಣನ ರವರ ಜಮೀನು ಇರುತ್ತದೆ. ಕೆಲ್ಲೋಡು ಸರ್ವೆ ನಂಃ74 ರಲ್ಲಿ 2 ಎಕರೆ ಜಮೀನು ಈಗಿನ ಚಕ್ಕುಬಂದಿ ಪೂರ್ವಕ್ಕೆಃ-ಗೊರವಿನಗೊಂಡನಹಳ್ಳಿಯ ಹನುಮಂತಪ್ಪನ ಮಗನ ಜಮೀನು, ಪಶ್ಚಿಮಕ್ಕೆಃ-ಅಂಜನಪ್ಪನ ಜಮೀನು, ಉತ್ತರಕ್ಕೆಃ-ಕೆಲ್ಲೋಡು ಮಾರುತಿರವರ ಜಮೀನು, ದಕ್ಷಿಣಕ್ಕೆಃ-ಸಂಗೇನಹಳ್ಳಿ ರಾಮಜ್ಜನ ಮಗ ವೆಂಕಟೇಶ್ ರವರ ಜಮೀನು ಇರುತ್ತದೆ. ಗೊರವಿಗೊಂಡನಹಳ್ಳಿಯ ನಿವೇಶನದ ಚ್ಕುಬಂದಿ ಪೂರ್ವಕ್ಕೆಃ-ರಾಮಣ್ಣನ ಮಕ್ಕಳು, ಪಶ್ಚಿಮಕ್ಕೆಃ-ಜಂತಿಕೊಳಲು ತಿಮ್ಮಣ್ಣನವರ ಮಕ್ಕಳು, ಉತ್ತರಕ್ಕೆಃ-ರಸ್ತೆ, ದಕ್ಷಿಣಕ್ಕೆಃ-ರಸ್ತೆ ಇರುತ್ತದೆ.

5. 2ನೇ ಪ್ರತಿವಾದಿಗೆ ಬರೆದುಕೊಟ್ಟು ಹಕ್ಕು ಖುಲಾಸೆ ಪತ್ರ ನೊಂದಾವಣಿ ಆಗಿರುತ್ತದೆ. ಸಾಕ್ಷಿಯು ದಿಃ08-03-1976 ಎಂದು ಸ್ವತಃ ನುಡಿಯುತ್ತಾರೆ. ಆ ಸಮಯದಲ್ಲಿ 2ನೇ ಪ್ರತಿವಾದಿಗೆ ಜಮೀನು ಇದ್ದು ಮನೆ ಇರಲಿಲ್ಲ. ಸದರಿ ನಿವೇಶನದಲ್ಲಿ ಚಂದ್ರಪ್ಪ ಮನೆ ನಿರ್ಮಿಸಿರುತ್ತಾರೆ. ಮನೆಯನ್ನು ಸಾಲ ಮಾಡಿ ಕಟ್ಟಿರುತ್ತಾರೆ ಎಂರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಸಿದ್ದಮ್ಮ 1981 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಸಿದ್ದಮ್ಮ ಮರಣ ಹೊಂದಿದ ಘಳಿಗೆ ಚೆನ್ನಾಗಿರಲಿಲ್ಲ ಎಂದು ನಾವುಗಳು ಮನೆಯನ್ನು ಖಾಲಿ ಮಾಡಿದ್ದೆವು. ಆಗ ನಾವು ಚಂದ್ರಪ್ಪನು ಕಟ್ಟಿಸಿದ ಮನೆಗೆ ಹೋಗಿ ಸೇರಿಕೊಂಡೆವು ಎಂದರೆ ಸುಳ್ಳು. ನಾನು ನಮ್ಮ ಕುಟುಂಬ ಸದಸ್ಯರು 1985 ರವೆರೆಗೂ ವಾಸವಿದ್ದೆವು ಎಂದರೆ ಸುಳ್ಳು. ಆ ಸಮಯದಲ್ಲಿ ನಾವು ಕುಟುಂಬಸ್ಥರು ಮರುಕೂಡಿಕೆ ಆಗಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ತಂದೆ ಚಂದ್ರಪ್ಪನಿಗೆ ಅನ್ಯಾಯ ಆಗಿರುತ್ತದೆ ಎಂದು ತಮ್ಮ ತಪ್ಪು ಅರಿವುಮಾಡಿಕೊಂಡು ಪಶ್ಚಾತ್ತಾಪಪಟ್ಟರು ಎಂದರೆ ಸುಳ್ಳು.

ಆಗ ನನ್ನ ತಂದೆ ಕುಟುಂಬದ ಆಸ್ತಿಗಳನ್ನು ಸೇರಿಸಿ ಪಂಚಾಯಿತಿದಾರರ ಸಮಕ್ಷಮ ದಿಃ30-03-1985 ರಂದು ಮರುವಿಂಗಡನೆ ಮಾಡಿದರು ಎಂದರೆ ಸುಳ್ಳು. ಆಗ ಛಾಪ ಕಾಗದಕ್ಕೆ ನಾನು, ನನ್ನ ತಂದೆ ಮತ್ತು ಕುಟುಂಬದವರು ಸಹಿ ಮಾಡಿರುತ್ತೇವೆ ಎಂದರೆ ಸುಳ್ಳು.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**